ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸ್ರ 1885ನೇ ಇಸವಿ ನವಂಬರ್ ತಾರೀಖು 3ರಲ್ಲು ಡಿಸ್ಟ್ರಿಕ್ಟ್ ಮುಜಕೂರ್ ಚನ್ನಪಟ್ಟಣದ ಫಿರಕಾ ವೊಗೇನಹಳ್ಳಿ ಗ್ರಾಮದ ಮಣ್ಣುಗುಡ್ಡೆಯಲ್ಲಿ ಚಿನ್ನದ 5 ಅರ್ಧವರಹಾ ಮತ್ತು ಚಿನ್ನದ 319 ಹಣಗಳು ಇವೆರಡೂ ಕೇರಿ ಸುಮಾರು 100—5—4 ರೂಪಾಯಿ ಆಂದಾಜು ಬಾಳುವ ಮೇಲ್ಕಂಡ ನಿಕ್ಷೇಪವು ದೊರಕಿರುತ್ತೆ, ಇದರಮೇಲೆ ಹಕ್ಕು ಬಾಧ್ಯತೆ ಇರತಕ್ಕವರು ಈ ಇಸ್ತಿಹಾರ್ ತಾರೀಖು ಲಾಗಾಯತು 6 ತಿಂಗಳ ವಳಗಾಗಿ ಬೆಂಗಳೂರಲ್ಲಿರುವ ನಮ್ಮ ಆಫೀಸ್ ರೂಬರೂ ಖುದ್ದಾಗಲಿ ಅಥವಾ ಏಜಂಟರ ಮೂಲಕವಾಗಲಿ ಹಾಜರಾಗಿ ತಮ್ಮ ಹಕ್ಕುದಾರಿಯನ್ನ ಸ್ಥಿರಪಡಿಸಿಕೊಳ್ಳತಕ್ಕದ್ದಾಗಿರುತ್ತೆ.

ಬತಾರೀಖು 12ನೇ ನವಂಬರ್ 1885ನೇ ಇಸವಿ ದರಜಾಗಾ ಬೆಂಗಳೂರು.

ಎ. ಹೆಚ್. ವೆಕ್ಕೆಟಯರ್,
ಡೆಪ್ಯುಟಿ ಕಮ್ಮಿಷನರ್.

ತಾರೀಖು 13ನೇ ನವಂಬರ್ 1885.

ಇದರಿಂದ ತಿಳಿಸುವದೇನಂದರೆ, ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿಯೂ ಡಿಸ್ಟ್ರಿಕ್ಟ್ ಲಾಕಪ್ಪಿನಲ್ಲಿಯೂ ಖೈದ್ ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ರ 1886ನೇ ಇಸವಿ ಜನವರೀ ಗುರ್ತೇ ತಾರೀಖು ಮೊದಲು 1886ನೇ ಡಿಸಂಬರ್ 31ನೇ ತಾರೀಖುವರೆಗೆ ಎರಡು ದಿನಗಳೂ ಕೇರಿ ಬೇಕಾದ ಆಹಾರ ವಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದ್ ಮಾಡಲ್ಪಟ್ಟ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರು, ಸ್ರ 1885ನೇ ಇಸವಿ ಡಿಸಂಬರ್ 10ನೇ ತಾರೀಖುವರೆಗೆ ತೆಗದುಕೊಳ್ಳುವರು.

2. ಸದರೀ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲವು.

3. "ಸೆಂಟ್ರಲ್ ಜೈಲ್ ಮತ್ತು ಡಿಸ್ಟ್ರಿಕ್ಟ್ ಲಾಕಪ್ಪಿಗೆ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂಬದಾಗಿ ದರಖಾಸ್ತುಗಳ ಮೇಲೆ ಬರೆದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಅಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಸೆಂಟ್ರಲ್ ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ, ಮೇಲ್ಕಂಡ ತಾರೀಖಿನೊಳಗೆ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

1 ನೇಟಿವ್. ಕೂಲಿಯವರಾದ ಖೈದಿಗಳು A ಕ್ಲಾಸ್

2 ಡಿಟೋ ಡಿಟೋ B "

3 ಡಿಟೋ ಡಿಟೋ ಅಲ್ಪವಾಯಿದೆಯವರು C ಕ್ಲಾಸ್

4 ನೇಟಿವ್ ಕೂಲೀ ಮಾಡದ ಗಂಜಸರು, ಹೆಂಗಸರು, ವಿಚಾರಣೆಯಲ್ಲಿ ಇರತಕ್ಕವರು, D ಕ್ಲಾಸ್

5 ಹುಡುಗರಾದ ಖೈದೀರು "

6 ಯೂರೋಪಿಯರ್ಸಗಳು ವ ಈಸ್ಟ್ ಇಂಡಿಯರ್ಸಗಳು